ಎಂ.ವಿ.ಸಿ.45/2024,    ಪಿ.ಡಬ್ಲೂ-1    ಹೆಸರುಃ ಎಂ.ಗೋವಿಂದಪ್ಪ

**ದಿಃ05-11-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಆರ್.ಎಸ್. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಹೊಳಲ್ಕೆರೆ ಪೊಲೀಸ್ ಠಾಣೆಯ ಠಾಣಾ ಮೊಖದ್ದಮೆ ಸಂಖ್ಯೆ 216/2023 ಕ್ಕೆ ಸಂಬಂಧಿಸಿದ ದೂರು, ಪ್ರಥಮ ವರ್ತಮಾನ ವರದಿ, ಮಹಜರು, ವಾಹನ ಅಮಾನತ್ತು ಪಂಚನಾಮೆ, ವಾಹನ ತಪಾಸಣ ವರದಿ, ಅರ್ಜಿದಾರರ ಹೇಳಿಕೆ, ಗಾಯದ ಪ್ರಮಾಣ ಪತ್ರ ಮತ್ತು ದೋಷಾರೋಪಣ ಪಟ್ಟಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 8 ಎಂದು ಗುರುತಿಸಲಾಯಿತು. ಜಿಲ್ಲಾ ಆಸ್ಪತ್ರೆ, ವೆನ್‌ಲಾಕ್ ರವರು ನೀಡಿರುವ ಹೊರರೋಗಿಗಳ ವಿಭಾಗದ ದಾಖಲೆಯನ್ನು ಹಾಜರುಪಡಿಸಿದ್ದು ನಿಪಿ.9 ಎಂದು ಗುರುತಿಸಲಾಯಿತು. ಜಸ್ಟೀಸ್ ಕೆ.ಎಸ್.ಹೆಗ್ಗಡೆ ಚಾರಿಟಬಲ್ ಆಸ್ಪತ್ರೆ ರವರು ನೀಡಿರುವ ಬಿಡುಗಡೆ ಸಾರಾಂಶವನ್ನು ಹಾಜರುಪಡಿಸಿದ್ದು ನಿಪಿ.10 ಮತ್ತು 11 ಎಂದು ಗುರುತಿಸಲಾಯಿತು. ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ.12 ಎಂದು ಗುರುತಿಸಲಾಯಿತು. ಕ್ಷ ಕಿರಣವನ್ನು ಹಾಜರುಪಡಿಸಿದ್ದು ನಿಪಿ.13 ಎಂದು ಗುರುತಿಸಲಾಯಿತು. 5 ವೈದ್ಯಕೀಯ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ನಿಃ.14(1) ರಿಂದ 14(5) ಎಂದು ಗುರುತಿಸಲಾಯಿತು. 28 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.15(1) ರಿಂದ ನಿಪಿ.15(28) ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ